**CCE RR**
**UN-REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 23. 03. 2018 ] **ಸಂಕೇತ ಸಂಖ್ಯೆ : 01-K**

Date : 23. 03. 2018 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.**<br>**(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 9 × 1 = 9 |
| 1. | ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ತಿಳಿದುಕೊಂಡಿರುವ ಅಂಶಗಳು ಯಾವುವು ?<br>***ಉತ್ತರ :***<br>ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ ಮತ್ತು ಅಣುಶಕ್ತಿ ಬಗೆಗೆ ತಿಳಿದುಕೊಂಡಿದ್ದಾರೆ. | |
| 2. | ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು ?<br>***ಉತ್ತರ :***<br>ನಾಡ ಭವ್ಯ ಜನರು ಬುಕ್ಕರಾಯನ ಬಳಿ ಭಕ್ತರು ಮಾಡುವ ಅನ್ಯಾಯಗಳನ್ನು ಕುರಿತು ಬಿನ್ನಹ ಮಾಡಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?<br>***ಉತ್ತರ :***<br>ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯನವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು. | |
| 4. | ಮನೆಮಂಚಮ್ಮನ ಕಥೆ ಹೇಳಿದ ಕವಿ ಯಾರು ?<br>***ಉತ್ತರ :***<br>ಮನೆಮಂಚಮ್ಮನ ಕಥೆ ಹೇಳಿದವರು ಕವಿ ಸಿದ್ದಲಿಂಗಯ್ಯ. | |
| 5. | ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?<br>***ಉತ್ತರ :***<br>ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿದನು. | |
| 6. | ಗಾಂಡೀವಿ ಎಂದು ಹೆಸರು ಪಡೆದವರು ಯಾರು ?<br>***ಉತ್ತರ :***<br>ಗಾಂಡೀವಿ ಎಂದು ಹೆಸರು ಪಡೆದವರು 'ಅರ್ಜುನ'. | |
| 7. | ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ?<br>***ಉತ್ತರ :***<br>ಶಿವನಿಗೆ ಸತಿಪತಿಗಳೊಂದಾದ ಭಕ್ತಿ ಹಿತವೆನಿಸುತ್ತದೆ. | |
| 8. | ಅಜ್ಞಾನ ತೊಲಗಿಸಲು ಕವಯಿತ್ರಿ ಇಂದುಮತಿ ಲಮಾಣಿ ಏನಾಗ ಬಯಸಿದ್ದಾರೆ ?<br>***ಉತ್ತರ :***<br>ಅಜ್ಞಾನ ತೊಲಗಿಸಲು ಕವಯಿತ್ರಿ ಇಂದುಮತಿ ಲಮಾಣಿಯವರು ವಾಗ್ದೇವಿಯ ಕೈಯಲ್ಲಿರುವ ಗ್ರಂಥವಾಗಬೇಕೆಂದು ಬಯಸಿದ್ದಾರೆ. | |
| 9. | ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?<br>***ಉತ್ತರ :***<br>ಮುದ್ದು ಪಾರಿವಾಳಗಳ ಜೋಡಿಯು ದಟ್ಟ ಕಾಡಿನ ಹೆಮ್ಮರದ ಹೊದರಿನಲಿ ಸಂಸಾರ ಹೂಡಿತ್ತು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $10 \times 2 = 20$ |
| 10. | 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ ?<br>***ಉತ್ತರ :***<br>ಸಂಪ್ರದಾಯವನ್ನು ವಿರೋಧಿಸುವವರ (ನಾಸ್ತಿಕರ) ಪಾಲಿಗೆ ಬಡವಾಮುಖಾಗ್ನಿಯಂತಿರುವವರೂ, ಶ್ರೀರಂಗರಾಜನ ಚರಣಾಂಬುಜ ಮೂಲ ದಾಸವರೇಣ್ಯರೂ, ಶ್ರೀವಿಷ್ಣುಲೋಕ ಮುನಿ ಮಂಟಪಕ್ಕೆ ಮಾರ್ಗದರ್ಶಕರೂ, ಯತಿಗಳಿಗೇ ರಾಜರಂತಿರುವವರೂ ಆಗಿದ್ದಾರೆಂದು ಶ್ರೀರಾಮಾನುಜಾಚಾರ್ಯರನ್ನು ಧರ್ಮ ಸಮದೃಷ್ಟಿ ಪಾಠದಲ್ಲಿ ಕೊಂಡಾಡಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು ?<br>***ಉತ್ತರ :***<br>ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು, ಅದನ್ನು ತಡೆಯಲು ವಿಶ್ವೇಶ್ವರಯ್ಯನವರು ಎರಡೂ ನದಿಗಳಿಗೂ ಪ್ರತ್ಯೇಕ ಜಲಾಶಯಗಳನ್ನು ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್‌ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು. | |
| 12. | ಡಾ॥ ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು ?<br>***ಉತ್ತರ :***<br>ಡಾ॥ ಅಶೋಕ ಪೈರವರು ಮನಸ್ಸಿನ ಬಗ್ಗೆ ನಡೆಸಿರುವ ಒಂದು ಸಂಶೋಧನಾ ಸತ್ಯದಲ್ಲಿ ಹೀಗೆ ಹೇಳುತ್ತಾರೆ. ಕೆಲವು ಜನರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುತ್ತಾರೆ, ಇನ್ನೊಂದಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಮಾತುಕತೆಯಾಡುತ್ತ ತಮ್ಮಷ್ಟಕ್ಕೆ ತಾವಿರುತ್ತಾರೆ. ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೇ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸಿನಲ್ಲೂ ಸ್ವಲ್ಪ ಮಟ್ಟಿಗೆ ದುಗುಡ ಉಂಟಾಗುತ್ತದೆ. ಅದೇ ಟೆಲಿವಿಷನ್‌ನಲ್ಲಿ ಯಾವುದಾದರೂ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದ ತಮ್ಮಷ್ಟಕ್ಕೆ ತಾವೇ ಇರುವವರ ಮನಸ್ಸಿನ ಮೇಲೂ ಸಂತೋಷದ ಪರಿಣಾಮವನ್ನುಂಟು ಮಾಡುತ್ತದೆ. ಇದು "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ" ಎಂಬ ಸತ್ಯವನ್ನು ತಿಳಿಸುತ್ತದೆ. | |
| 13. | ಧರ್ಮಬುದ್ಧಿಯು ದುಷ್ಟಬುದ್ಧಿಯಿಂದ ಪಡೆದ ಸಲಹೆ ಯಾವುದು ?<br>***ಉತ್ತರ :***<br>ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಒಟ್ಟಾಗಿ ವ್ಯಾಪಾರದಿಂದ ಅಪಾರ ಹೊನ್ನನ್ನು ಸಂಪಾದಿಸಿ ಮತ್ತೆ ಮಧುರಾಪುರದ ಹೊರಗಿರುವ ಉದ್ಯಾನವನಕ್ಕೆ ಬಂದು ಬೀಡುಬಿಡುತ್ತಾರೆ. ಈ ಸಂದರ್ಭದಲ್ಲಿ ಧರ್ಮಬುದ್ಧಿಯು ಹೊನ್ನನ್ನು ಹಂಚಿಕೊಳ್ಳೋಣ ಎಂದು ಹೇಳುತ್ತಾನೆ. ಆಗ ದುಷ್ಟಬುದ್ಧಿಯು ಪಾಪಕರ್ಮ ಬುದ್ಧಿಯಾಗಿ ಹೀಗೆ ಸಲಹೆ ನೀಡುತ್ತಾನೆ. "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ, ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ನಮ್ಮ ಖರ್ಚಿಗೆ ಬೇಕಾಗುವಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹೊನ್ನನ್ನು ಇಲ್ಲಿಯೇ ಈ ದೊಡ್ಡ ವಟವೃಕ್ಷದ ಕೆಳಗೆ ಹೂಳೋಣ" ಎಂದು ಸಲಹೆ ನೀಡಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಮಾತಿನ ಮಹತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ ?<br>***ಉತ್ತರ :***<br>ಬಸವಣ್ಣನವರು ಮಾತಿನ ಮಹತ್ವವನ್ನು ಕುರಿತು, ಮಾತು ಮುತ್ತಿನಹಾರದಂತೆ ಕ್ರಮವಾಗಿರಬೇಕು, ಮೌಲ್ಯಯುತವಾಗಿರಬೇಕು, ಮಾಣಿಕ್ಯದ ದೀಪ್ತಿಯಂತೆ ಶಕ್ತಿಯುತವಾಗಿರಬೇಕು, ಸ್ಫಟಿಕದ ಶಲಾಕೆಯಂತೆ ಗಟ್ಟಿತನವಿರಬೇಕು. ನಡೆನುಡಿಗಳೊಂದಾಗಿ ಅಂತರಂಗದ ಮಹಾಲಿಂಗನಾದ ಕೂಡಲ ಸಂಗಮದೇವನು ಮೆಚ್ಚುವಂತಿರಬೇಕು. | |
| 15. | ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು ?<br>***ಉತ್ತರ :***<br>ಬುದ್ಧಿ ಮತ್ತು ಮಾತಿನ ಶಕ್ತಿಯಿಂದ ತಾನೇ ಸರ್ವಾಧಿಕಾರಿ ಎಂದು ತಿಳಿದುಕೊಂಡಿರುವ ಮಾನವ ಭೂಮಿಯ ಮೇಲೆ ಹಕ್ಕನ್ನು ಸಾಧಿಸುತ್ತ ಭ್ರಮೆಯಿಂದ, ಆಹಂಕಾರದಿಂದ ಗಡಿಯನ್ನು ನಿರ್ಮಿಸಿಕೊಂಡು, ಭೇದಭಾವದ ಅಸಮಾನತೆಯನ್ನು ಸೃಷ್ಟಿಸಿ, ಅದನ್ನು ರಕ್ಷಿಸುವ ಉದ್ದೇಶದಿಂದ ಹಲವು ಕಾದಾಟಗಳು ನಡೆದು ಗಡಿಯ ಆಚೆ–ಈಚೆ ಅನೇಕ ಜೀವಿಗಳು ಶವವಾದವು. | |
| 16. | ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿ.<br>***ಉತ್ತರ :***<br>ವಿಜ್ಞಾನಿಗಳು ಪ್ರಯೋಗ ಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ಅದು ನಿಜಜೀವನದಲ್ಲಿ ಅವರ ಆಲೋಚನಾಶಕ್ತಿ ರಜೆ ತೆಗೆದುಕೊಂಡಿದೆಯೇ ಎಂಬಂತೆ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಅವರ ಯೋಚನೆಯಲ್ಲಿ ಏಕ ಸೂತ್ರತೆ ಕಂಡುಬರುವುದಿಲ್ಲ. ಇದು ನಮ್ಮ ವಿಜ್ಞಾನಿಗಳ ವೈರುಧ್ಯ ಮನೋಭಾವ. | |
| 17. | ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ ?<br>***ಉತ್ತರ :***<br>ಆದಿ ತೀರ್ಥಂಕರನ ಮಗ ಭರತ ಚಕ್ರವರ್ತಿ ಷಟ್ಖಂಡಗಳನ್ನು ಗೆದ್ದು ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ ಬರೆಸಲು ಹೋಗುತ್ತಾನೆ. ಅಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮಪ್ರಶಂಸೆಗಳು ತುಂಬಿ ಹೋಗಿದ್ದವು. ಭರತೇಶನಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳವೇ ದೊರಕುವುದಿಲ್ಲ ಆದ್ದರಿಂದ ಭರತನು ತನ್ನ ಹೆಸರನ್ನು ಬರೆಸಲು ಸಾಧ್ಯವಾಗಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿತ್ತು ?<br>***ಉತ್ತರ :***<br>ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ 'ನಮ್ಮ ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿ, ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶಗಳನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು. ಅನಂತರ ನಾವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನಾವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿದ್ದೇವೆ ಎಂದುಕೊಂಡಾಗ ಬಾಳಿನಲ್ಲಿ ತೃಪ್ತಿ ದೊರೆಯುತ್ತದೆ ಎಂದು ವಿವೇಕಾನಂದರು ಅಭಿಪ್ರಾಯಿಸುತ್ತಾರೆ. | |
| 19. | 'ಬೀಸುಕಲ್ಲು' ಎಂಬ ಅರ್ಥ ಬರಲು ಹೇಳಿದ ಒಗಟನ್ನು ಬರೆಯಿರಿ.<br>***ಉತ್ತರ :***<br>'ಬೀಸುಕಲ್ಲು' ಎಂಬ ಅರ್ಥ ಬರಲು ಜನಪದರು ಹೇಳಿರುವ ಒಗಟು ಹೀಗಿದೆ<br>"ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು<br>ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ<br>ಕೈಗೆ ಹಲ್‌ಮುರ್ದು ಕೊಡುವೆನು" | |
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 4 × 3 = 12 |
| | ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 20. | "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ವಿ.ಕೃ. ಗೋಕಾಕ್ ವಿರಚಿತ 'ಜೀವನ ಪಾಠಗಳು' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ಜೀವನ ದೃಷ್ಟಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಭಗವದ್ಗೀತೆಯು "ಆತ್ಮಾನಂ ಸರ್ವ ಭೂತೇಷು ಸರ್ವ ಭೂತಾನಿಚಾತ್ಮನಿ" ಎನ್ನುತ್ತಾ ಆತ್ಮವು ಸರ್ವ ಭೂತಗಳಲ್ಲಿಯೂ ಅವಿಚ್ಛಿನ್ನವಾಗಿದ್ದು ಸರ್ವವೂ ಆತ್ಮವೇ ಆಗಿರುತ್ತದೆ ಎನ್ನುತ್ತದೆ. ಬರ್ನ್ಸ್ ಕವಿಯು "ಉಳಿದವರ ಕಣ್ಣಿನಲ್ಲಿ ಹೊಕ್ಕು ಅವರು ನಮ್ಮನ್ನು ಯಾವ ದೃಷ್ಟಿಯಿಂದ ಕಾಣುವರೋ ಆದೃಷ್ಟಿಯಿಂದ ನಾವು ನಮ್ಮನ್ನು ಕಂಡುಕೊಳ್ಳಬೇಕು" ಎನ್ನುವನು. ಸರ್ವಜ್ಞನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | "ಪರರನ್ನು ತನ್ನಂತೆಯೇ ಎಂದು ಬಗೆದು ಉಪಚರಿಸಿದರೆ ಕೈಲಾಸವೇ ಕೈಗೂಡುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ಜಗತ್ತಿನ ಎಲ್ಲಾ ಮಾನವರೂ ಸಮಾನರು, ಎಲ್ಲರೂ ಆತ್ಮ ಸ್ವರೂಪರು, ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನವನ್ನು ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನವನ್ನು ಗೌರವಿಸಿ ಹೆಚ್ಚಿನ ಸ್ಥಾನ ನೀಡಿದಾಗ ಕೈಲಾಸ ಕರತಲಾಮಲಕವಾಗುತ್ತದೆ ಎಂಬ ನುಡಿ ಸ್ವಾರಸ್ಯಪೂರ್ಣವಾಗಿದೆ. | |
| 21. | "ನಾನು ಮುಖ ಮೇಲಾಗಿ ಬಿದ್ದಿದ್ದೆನೆ ?" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಎ.ಎನ್. ಮೂರ್ತಿರಾಯರು ರಚಿಸಿರುವ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಶಾನುಭೋಗರು ಗಟ್ಟಿಮನಸ್ಸಿನವರು. ಚೇತರಿಸಿಕೊಂಡು ನಡೆದ ಸಂಗತಿಯನ್ನೆಲ್ಲ ನೆನಪಿಸಿಕೊಳ್ಳುತ್ತ ಖಿರ್ದಿ ಪುಸ್ತಕವನ್ನು ಬಲಪಡಿಸಿಕೊಂಡು, ಮೈಕೈಗೆ ನೋವಾಗಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡರು. ಆದರೆ ಅವರ ಮನಸ್ಸನ್ನೆಲ್ಲಾ ಒಂದು ವಿಸ್ಮಯ ಆವರಿಸಿತ್ತು. "ನಾನು ಬದುಕುಳಿದದ್ದು ಹೇಗೆ ? ಹುಲಿ ನನ್ನನ್ನು ಏಕೆ ತಿನ್ನಲಿಲ್ಲ ?" ಎಂದು ಯೋಚಿಸುತ್ತಾ ಗಾಡಿಯವನನ್ನು ಕುರಿತು ತಮ್ಮ ಮನಸ್ಸಿನಲ್ಲಿರುವುದನ್ನು ಖಾತ್ರಿಪಡಿಸಿಕೊಳ್ಳಲು ಪ್ರಶ್ನಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ಸಾವಿನ ಸಂಕಟದಿಂದ ಹೊರಬಂದ ಜೀವಕ್ಕೆ ಸಹಜವಾಗಿ ಉಂಟಾಗುವ ವಿಸ್ಮಯ ಹಾಗೂ ಮೆಚ್ಚುಗೆಯು ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 22. | "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಾ. ಬಿ.ಎಸ್. ಗದ್ದಗೀ ಮಠ ಅವರ 'ಕನ್ನಡ ಜನಪದ ಗೀತೆಗಳು' ಎಂಬ ಸಂಪಾದಿತ ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಕುಂಪಣಿ ಸರ್ಕಾರ 'ನಿಶ್ಶಸ್ತ್ರೀಕರಣ ಕಾಯ್ದೆ'ಯನ್ನು ಜಾರಿಗೆ ತಂದಿತು. ಕಾಯ್ದೆಯನ್ನು ಪಾಲಿಸದ ಹಲಗಲಿಯ ಬೇಡರು ತಮ್ಮ ಶಸ್ತ್ರಾಸ್ತ್ರಗಳನ್ನು ಹಿಂತಿರುಗಿಸಲು ಒಪ್ಪುವುದಿಲ್ಲ. ಈ ಸಂದರ್ಭದಲ್ಲಿ ಕಂಪನಿಯ ಸರ್ಕಾರ ಸೇನೆಗೆ, ಬಲವಂತವಾಗಿ ಆಯುಧಗಳನ್ನು ವಶಪಡಿಸಿಕೊಳ್ಳಿರಿ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ***ಸ್ವಾರಸ್ಯ :*** ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತದಲ್ಲಿ ಬ್ರಿಟಿಷರ ದರ್ಪ, ದೌರ್ಜನ್ಯಯುತ, ಧಮನಕಾರಿ ನೀತಿಯನ್ನು ಪ್ರಸ್ತುತ ವಾಕ್ಯದಲ್ಲಿ ಕಾಣಬಹುದಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | "ಜಾನಕಿಯ ಮಗನಿದಕೆ ಬೆದರುವನೆ"<br>***ಉತ್ತರ :***<br>**ಆಯ್ಕೆ :** ಪ್ರಸ್ತುತ ವಾಕ್ಯವನ್ನು ಉಪಮಾಲೋಲನಾದ ಲಕ್ಷ್ಮೀಶನ 'ಜೈಮಿನಿ ಭಾರತ'ದಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ವಾಲ್ಮೀಕಿಯ ಉಪವನಕ್ಕೆ ಲಗ್ಗೆಯಿಟ್ಟ ಯಾಗದ ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕದಳೀ ಗಿಡಕ್ಕೆ ಕಟ್ಟುತ್ತಾನೆ. ಇದನ್ನು ಕಂಡ ಮುನಿಸುತರು ಹೆದರಿ "ಇದು ರಾಜರ ಕುದುರೆ, ಇದನ್ನು ನಾವು ಕಟ್ಟಬಾರದು, ಭಟರು ನಮ್ಮನ್ನು ಬಡಿಯುತ್ತಾರೆ." ಎಂದು ಹೇಳಲು ಮುನಿಸುತರಾದ ನೀವು ಹೆದರಬಹುದು ಜಾನಕಿಯ ಮಗನಾದ ನಾನು ಹೆದರುವುದಿಲ್ಲ ಎಂದು ಲವನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>***ಸ್ವಾರಸ್ಯ :*** ಲವನು ಬೆಳೆದ ಪರಿಸರ ಋಷ್ಯಾಶ್ರಮವಾದರೂ ಸಹಜವಾಗಿ ಅವನ ಮೈಯಲ್ಲಿ ಹರಿಯುತ್ತಿರುವುದು ಕ್ಷಾತ್ರ ನೆತ್ತರು. ಇಲ್ಲಿ ಲವನ ಕ್ಷಾತ್ರ ತೇಜಸ್ಸು, ವೀರತನ, ಸಹಜ ಪೌರುಷ, ಲವನು ಬಾಲಕನಾದರೂ ಅವನ ಬಾಲ್ಯ ಬಾಲತನದಿಂದ ಕೂಡಿಲ್ಲ ಎಂಬ ಅಂಶ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.<br>**ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 24. | ಗೊರೂರು ರಾಮಸ್ವಾಮಿ ಅಯ್ಯಂಗಾರ್ :<br>***ಉತ್ತರ :***<br>ನವೋದಯ ಗದ್ಯ ಪ್ರಕಾರದ ಪ್ರಮುಖ ಲೇಖಕರಲ್ಲಿ ಒಬ್ಬರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಕ್ರಿ.ಶ. ೧೯೦೪ ರಲ್ಲಿ ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಗಾಂಧೀತತ್ವ ಪ್ರಚಾರಕರಾದ ಇವರು ಸಣ್ಣಕತೆ ಪ್ರಬಂಧ ಪ್ರವಾಸಕಥನ, ಕಾದಂಬರಿ, ಜೀವನ ಚರಿತೆ, ಅನುವಾದದಂತಹ ವಿವಿಧ ಪ್ರಕಾರದ ಕೃತಿಗಳನ್ನು ರಚಿಸಿದ್ದಾರೆ. ಗರುಡಗಂಬದ ದಾಸಯ್ಯ, ಮೆರವಣಿಗೆ, ಹೇಮಾವತಿ ತೀರದಲ್ಲಿ, ಪುನರ್ಜನ್ಮ, ನಮ್ಮ ಊರಿನ ರಸಿಕರು ಇವು ಇವರ ಪ್ರಮುಖ ಕೃತಿಗಳಾಗಿವೆ. ಇವರ ಅಮೆರಿಕದಲ್ಲಿ ಗೊರೂರು ಕೃತಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ ಪಡೆದಿರುವ ಗೊರೂರರು ೧೯೬೭ ರಲ್ಲಿ ತರೀಕೆರೆಯಲ್ಲಿ ನಡೆದ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೮೨ ರಲ್ಲಿ ಶಿರಸಿಯಲ್ಲಿ ಸಮಾವೇಶಗೊಂಡಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | ಪಂಪ :<br>***ಉತ್ತರ :***<br>ಆದಿಕವಿ ಎಂದು ಪ್ರಸಿದ್ಧನಾಗಿರುವ ಮಹಾಕವಿ ಪಂಪನು ಕ್ರಿ.ಶ. ೯೪೧ ರಲ್ಲಿ ವೆಂಗಿ ಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದರು. ಈತನು ಚಾಲುಕ್ಯ ದೊರೆಯಾದ ಅರಿಕೇಸರಿಯ ಆಸ್ಥಾನದಲ್ಲಿದ್ದು ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯಗಳನ್ನು ನೀಡಿದ್ದಾನೆ.<br>ಈತನಿಗೆ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ ಎಂಬ ಬಿರುದುಗಳಿದ್ದವು. | |
| 26. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ಕಲುಷಿತವಾದೀ ..............................................................<br>..............................................................<br>..............................................................<br>.............................................................. ಮುಟ್ಟೋಣ.<br>***ಅಥವಾ***<br>ಮತಗಳೆಲ್ಲವೂ ..............................................................<br>..............................................................<br>..............................................................<br>.............................................................. ಬಿತ್ತೋಣ.<br>***ಉತ್ತರ :***<br>ಕಲುಷಿತವಾದೀ ನದೀಜಲಗಳಿಗೆ<br>ಮುಂಗಾರಿನ ಮಳೆಯಾಗೋಣ.<br>ಬರಡಾಗಿರುವೀ ಕಾಡುಮೇಡುಗಳ<br>ವಸಂತವಾಗುತ ಮುಟ್ಟೋಣ.<br>**ಅಥವಾ**<br>ಮತಗಳೆಲ್ಲವೂ ಪಥಗಳು ಎನ್ನುವ<br>ಹೊಸ ಎಚ್ಚರದೊಳು ಬದುಕೋಣ<br>ಭಯ–ಸಂಶಯದೊಳು ಕಂದಿದ ಕಣ್ಣೊಳು<br>ನಾಳಿನ ಕನಸನು ಬಿತ್ತೋಣ. | $1 \times 4 = 4$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ ?

***ಉತ್ತರ :***

ವರಕವಿ ಬೇಂದ್ರೆಯವರು ನವೋದಯ ಕಾಲ ಘಟ್ಟದಲ್ಲಿ ಬರೆದ ಕವನಗಳಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ ?' ಎಂಬುದು ಪ್ರಸಿದ್ಧ ಕವನವಾಗಿದೆ. ಇದರಲ್ಲಿ ಕಾಲವನ್ನು ಹಕ್ಕಿಗೆ ಸಾಂಕೇತಿಸಿ, ಕಾಲದ ಮಹತ್ವವನ್ನು ಬಹು ಮನೋಜ್ಞವಾಗಿ, ಮಾರ್ಮಿಕವಾಗಿ ಪ್ರತಿಮಾರೂಪದಲ್ಲಿ ಪ್ರಸ್ತುತಪಡಿಸುತ್ತಾರೆ. ಚಲನಶೀಲತೆ ಎಂಬುದು ಬದುಕಿನ ಜೀವಂತಿಕೆಯ ಗುಣವಾಗಿದೆ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು. ನಡೆದ ಪ್ರತಿಯೊಂದು ಘಟನೆಯು ಕಾಲ ಉರುಳಿದಂತೆ ಇತಿಹಾಸವಾಗುತ್ತದೆ.

ಕಾಲನ ಪರಿಧಿಯೊಳಗೆ ಹಲವು ಸಣ್ಣ ಪುಟ್ಟ, ಮಹಾ ರಾಜ್ಯ, ಸಾಮ್ರಾಜ್ಯಗಳನ್ನು ಸೃಷ್ಟಿಸಿ, ಬೆಳೆಸಿ ಅವುಗಳ ಕೊಯ್ಲಿನ ಕಾರ್ಯವನ್ನೂ ಮಾಡುತ್ತದೆ. ಹಲವು ಕೋಟೆ ಕೊತ್ತಲಗಳನ್ನೂ, ಮಹಾ ಮಂಡಲಗಳನ್ನೂ, ಖಂಡ–ಖಂಡಗಳನ್ನೂ ತೇಲಿಸಿ ಮುಳುಗಿಸಿ ನಾನೆಂದು ಅಹಂಕರಿಸುವ ರಾಜ ಮಹಾರಾಜರ, ಸಾರ್ವಭೌಮರ ನೆತ್ತಿಯನ್ನು ಕುಕ್ಕಿ ಹೊಸ ಪರಿವರ್ತನೆಗೆ ನಾಂದಿ ಹಾಡಿದೆ. ತನ್ಮೂಲಕ ಹಲವು ಚೇತನಗಳಲ್ಲಿ ನವ ಚೈತನ್ಯವನ್ನು ತುಂಬುವುದರ ಮೂಲಕ ನವೋದಯ ಚಿಂತನಶೀಲ ಚಟುವಟಿಕೆಗಳಿಗೆ ದಾರಿ ಮಾಡಿ ಕೊಟ್ಟಿದೆ. "ಕಾಲಕ್ಕೆ ಅತೀತರು ಯಾರೂ ಇಲ್ಲ", "ಕಾಲಾಯತಸ್ಮೈ ನಮಃ" ಎಂಬ ಮೌಲ್ಯ ಇಲ್ಲಿದೆ.

| | | |
|---|---|---|
| 28. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* <br> ಶ್ರೀರಾಮನ ಗುಣಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಪರಮ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಶಬರಿಯೂ ಒಬ್ಬಳು. ಈಕೆ ಮತಂಗ ಋಷಿಯ ಆಶ್ರಯದಲ್ಲಿದ್ದವಳು. ಮತಂಗರು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತಲ್ಲೀನಳಾಗಿ, ಶ್ರೀರಾಮನ ದರ್ಶನಕ್ಕಾಗಿ ಹಾತೊರೆಯುತ್ತಿದ್ದಳು. <br> ಸೀತಾಪಹರಣದ ನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಯಾದ ದನು ಎಂಬುವವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ. ಅಲ್ಲಿ ಶ್ರೀರಾಮನ ಬರುವಿಕೆಯನ್ನೇ ಕಾದುಕಾದು ಕಾತರಿಸಿ ಮುಪ್ಪಾದ ಭಕ್ತಿಯೇ ರೂಪುಗೊಂಡಂತೆ ಇದ್ದ ಶಬರಿಯನ್ನು ದರ್ಶಿಸುತ್ತಾರೆ. ತನ್ನ ಆರಾಧ್ಯದೈವ ಶ್ರೀರಾಮಲಕ್ಷ್ಮಣರನ್ನು ಕಂಡೊಡನೆ ಸಂಭ್ರಮಿಸುತ್ತಾಳೆ. <br> ಶಬರಿ ಬೆರಗಿನಿಂದ ಶ್ರೀರಾಮನನ್ನು ಕಂಡ ಬಳಿಕ ಸನಿಯಕ್ಕೈದು ಮೈಯನ್ನು ಮುಟ್ಟಿ, ಪಾದ ಸ್ಪರ್ಶಿಸಿ ಕಣ್ಣಿಗೊತ್ತಿಕೊಂಡು, ಆನಂದ ಬಾಷ್ಪಸುರಿಸುತ್ತ ಬನ್ನಿ ಎಂದು ಉದ್ಗರಿಸುತ್ತಾಳೆ. ಅಯ್ಯೋ ಏನೂ ಅಣಿಯೇ ಇಲ್ಲ, ನಿನ್ನೆಯಷ್ಟು ಚೆನ್ನಾಗಿಲ್ಲ ಎಂದು ಹಲುಬುತ್ತಾಳೆ. ತನ್ನ ಮನದ ಬಯಕೆಯಂತೆ, ಬಗೆಬಗೆಯ ಕಂಪನ್ನು ಸೂಸುವ ವನಮಾಲೆಯನ್ನು ಕೊರಳಿಗಿಟ್ಟು, ನೋಡಿ ಆನಂದಿಸುತ್ತಾ, ಮಗುವಿನಂತೆ ಹಿಗುತ್ತಾಳೆ. ವನದಲ್ಲಿ ಸಂಗ್ರಹಿಸಿದ ಹಣ್ಣುಗಳನ್ನು ಅವರಿಗೆ ಕೊಡುತ್ತ ಇದರಷ್ಟು ರುಚಿಯಾದ ಹಣ್ಣು ಈ ಜಗದೊಳಗೇ ಇಲ್ಲ, ನಿಮಗಾಗಿಯೇ ತಂದೆನು ಎಂದು ಹೇಳುತ್ತಾ, ಮಂದಹಾಸವನ್ನು ಬೀರುತ್ತಾ, ರಾಮಲಕ್ಷ್ಮಣರನ್ನು ಮತ್ತೆ ಮತ್ತೆ ನೋಡಿ ಧನ್ಯತೆಯನ್ನು ಮೆರೆಯುತ್ತಾಳೆ. ಹೀಗೆ ರಾಮನನ್ನು ಕಾಣುವ ಅವಳ ಚಿಂತೆ ಹಿಂಗುತ್ತದೆ. <br> **ಅಥವಾ** <br> ಶಬರಿ ಶ್ರೀರಾಮನ ಪರಮಭಕ್ತೆಯಾಗಿದ್ದಳು. ತನ್ನ ಗುರುಗಳಾದ ಮತಂಗ ಋಷಿಗಳ ಆಶ್ರಮದಲ್ಲಿದ್ದ ಈಕೆ ಅವರ ಆಣತಿಯಂತೆ ರಾಮನ ದರ್ಶನಕ್ಕಾಗಿ ಕಾದಿದ್ದಳು. ಮತಂಗ ಋಷಿಗಳು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ಬರುವಿಕೆಗಾಗಿ ದಿನದಿನವೂ ಕಾದುಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತೆ ಕಾಣುತ್ತಿದ್ದಳು. <br> ರಾಮನನ್ನು ಕಂಡ ನಂತರ ಧನ್ಯೆ ನಾನು, ಸಿದ್ಧರ ವರವಿಂದು ನನಗೆ ಫಲಿಸಿದೆ. ಗುರುವನ್ನು ಪೂಜೆಗೈದ ತಪದ ಫಲವು ನನಗೆ ಸಂದಿತು ಎಂದು ಸಂತಸಗೊಳ್ಳುತ್ತಾಳೆ. ಸಿದ್ಧರೊರೆದ ಮಾತು ನನಗೆ ಸಿದ್ಧಿಯಾಯಿತು ಇಂದು, ನನಗೆ ಮುಕ್ತಿಯನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದಯಪಾಲಿಸೆಂದು ಬೇಡಿದುದು ಫಲಿಸಿತೆಂದು ಹರ್ಷಿಸುತ್ತಾಳೆ. ಶ್ರೀರಾಮನನ್ನು ಕುರಿತು ಮುಕ್ತಿಯನ್ನು ದಯಪಾಲಿಸಲು ಬೇಡಿಕೊಳ್ಳುತ್ತಾಳೆ. ಪುಣ್ಯಲೋಕ ದೊರೆಯಲೆಂದು ಹರಕೆಯಿಡೆನಗೆ ಎಂದು ರಾಮನನ್ನು ಬೇಡುತ್ತಾಳೆ. ಅವಳ ಅಭೀಷ್ಟ ಸಿದ್ಧಿಸುತ್ತದೆ. ಶಬರಿ ಅಗ್ನಿಕುಂಡದಲ್ಲಿ ನಿರ್ವಾಣವನ್ನು ಹೊಂದುತ್ತಾಳೆ. ಹೀಗೆ ತನ್ನ ಅಭಿಷ್ಟವನ್ನು ಈಡೇರಿಸಿಕೊಳ್ಳುವುದಕ್ಕಾಗಿ ಜೀವನವಿಡೀ ತವಸಿಯಂತೆ ಕಾದ ಶಬರಿ 'ತಾಳುವಿಕೆಗಿಂತ ತಪವು ಇಲ್ಲ' ಎಂಬ ಮಾತಿನಂತೆ ಗುರುಗಳ ಮಾತನ್ನು ನಂಬಿ ಜೀವನದ ಧ್ಯೇಯವನ್ನು ಸಾಧಿಸಿಕೊಂಡ ಪರಮಭಕ್ತೆ ಎನ್ನಬಹುದು. | |
| 29. | ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ?<br>***ಅಥವಾ***<br>ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಃಸ್ಥಿತಿಯನ್ನು ತಿಳಿಸಿ.<br>***ಉತ್ತರ :***<br>ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಅತ್ಯಗತ್ಯ. ಛಲ, ಮತ್ಸರ ಪ್ರಧಾನವಾದರೆ ಸಂಘರ್ಷ ಅನಿವಾರ್ಯವಾಗುತ್ತದೆ. ಶತ್ರುವಿನೊಡನೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದಿಂದ ವಿವಿಧ ಆಯಾಮಗಳನ್ನು ಶಮನಗೊಳಿಸಿದಾಗ ಗೆಲುವು ಸಾಧ್ಯ ಎಂಬುದು ರಾಜತಂತ್ರ. ಕೌರವರೊಂದಿಗೆ ಸಂಧಿ ಮುರಿದು ಬಿದ್ದು ಯುದ್ಧವೇ ಸಿದ್ಧ ಎಂದು ತೀರ್ಮಾನವಾದಾಗ ಕೃಷ್ಣನು ಕರ್ಣನನ್ನು ಕರೆದು ಮೈದುನತನದ ಸರಸವನ್ನು ಎಸಗಿ ತನ್ನ ರಥದಲ್ಲಿ ತೊಡೆಗೆ ತೊಡತಾಗುವಂತೆ ಕೂರಿಸಿಕೊಂಡು ಕರ್ಣನ ಜನ್ಮರಹಸ್ಯವನ್ನು ಹೇಳುತ್ತಾನೆ. ನಿಮ್ಮಲ್ಲಿ ಯಾದವರು ಕೌರವರು ಎಂಬ ಭೇದವಿಲ್ಲ. ಈ ಭೂಮಿಗೆ ನಿಜವಾಗಿ ನೀನೇ ಒಡೆಯನಾಗಬೇಕು. ಕುಂತಿ ಪಡೆದ ಐದು ಮಂತ್ರಗಳಲ್ಲಿ ನೀನೆ ಮೊದಲಿಗ, ಎರಡನೆಯವನು ಯುಧಿಷ್ಠಿರ, ಮೂರನೆಯವನು ಕಲಿಭೀಮ, ನಾಲ್ಕನೆಯವನು ಅರ್ಜುನ, ಕೊನೆಯ ಐದನೆಯ ಮಂತ್ರದಲ್ಲಿ ಮಾದ್ರಿಗೆ ನಕುಲ–ಸಹದೇವರು ಜನಿಸಿದರು. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ. ಕೌರವರು, ಪಾಂಡವರು ನಿನ್ನ ಸೇವಕರಾಗಿರುತ್ತಾರೆ. ಇದನ್ನು ಬಿಟ್ಟು ದುರ್ಯೋಧನನ ಎಂಜಲಿಗೆ ಕೈಚಾಚುವುದು ಸರಿಯೆ ? ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು, ನಡುವಿನಲ್ಲಿ ಮಾದ್ರರು, ಮಾಗಧರು, ಯಾದವರು ಇರುತ್ತಾರೆ. ಇವರ ನಡುವೆ ರಾಜನಾಗಿ ವಿಜೃಂಭಿಸುವುದನ್ನು ಬಿಟ್ಟು ದುರ್ಯೋಧನ ಕರೆದಾಗ ಸೇವಕನಂತೆ 'ಸ್ವಾಮಿ, ನಿಮ್ಮ ಪ್ರಸಾದ' ಎನ್ನುವುದು ಕಷ್ಟವಾಗುವುದಿಲ್ಲವೆ ? ಆದ್ದರಿಂದ ಪಾಂಡವರ ಪಕ್ಷವನ್ನು ಸೇರುವಂತೆ ಕೃಷ್ಣನು ಆಮಿಷಗಳನ್ನು ಒಡ್ಡುತ್ತಾನೆ.<br>***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | ದುರ್ಯೋಧನ ಪಾಂಡವರನ್ನು ದ್ಯೂತದಲ್ಲಿ ಸೋಲಿಸುತ್ತಾನೆ. ಪಣದಂತೆ ೧೨ ವರ್ಷ ವನವಾಸ ಒಂದು ವರ್ಷ ಅಜ್ಞಾತವಾಸ ಮುಗಿಸಿ ಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳಿದಾಗ ದುರ್ಯೋಧನ ಕೊಡಲು ನಿರಾಕರಿಸುತ್ತಾನೆ. ಸಂಧಾನದ ಮೂಲಕ ರಾಜ್ಯವನ್ನು ಮರಳಿ ಪಡೆಯಲು ಧರ್ಮರಾಯ ಕೃಷ್ಣನನ್ನು ಕಳಿಸುತ್ತಾನೆ. ಸಂಧಿ ಮುರಿದು ಬಿದ್ದು ಯುದ್ಧವೇ ಅನಿವಾರ್ಯ ಎಂದು ತೀರ್ಮಾನಿಸಿದಾಗ, ಕೌರವರ ಸೇನೆಯಲ್ಲಿದ್ದ ಕರ್ಣನೇ ಪಾಂಡವರಿಗೆ ಪ್ರಬಲ ಎದುರಾಳಿ. ಆತನಿಂದ ಪಾಂಡವರನ್ನು ರಕ್ಷಿಸಬೇಕೆಂದು ಬಗೆದು ಕರ್ಣನಿಗೆ ಆತನ ಜನ್ಮರಹಸ್ಯವನ್ನು ತಿಳಿಸಿ. ಪಾಂಡವರಲ್ಲಿ ಹಿರಿಯ ನೀನೇ, ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ ಎಂಬ ಆಮಿಷ ಒಡ್ಡುತ್ತಾನೆ. ತನ್ನ ಜನ್ಮರಹಸ್ಯ ತಿಳಿದು ಕರ್ಣನು ಕುತ್ತಿಗೆಯ ನರಗಳು ಬಿಗಿದು, ಕಣ್ಣೀರು ಸುರಿಸುತ್ತಾನೆ. ಕೌರವನಿಗೆ ಕೇಡಾಗುತ್ತದೆ. ಕೃಷ್ಣನ ಹಗೆ ಹೊಗೆದೋರದೆ ಸುಡದೆ ಬಿಡುವುದಿಲ್ಲ ಎಂದು ಚಿಂತಿತನಾಗುತ್ತಾನೆ. ಕೆಲ ಕಾಲ ಸುಮ್ಮನಿದ್ದ ಕರ್ಣನನ್ನು ಕುರಿತು ಕೃಷ್ಣ ಹೀಗೆ ಹೇಳುತ್ತಾನೆ. 'ಪಾಂಡವರಿಂದ ಸೇವೆ ಮಾಡಿಸಿಕೊಳ್ಳುವುದು ನಿನಗಿಷ್ಟವಿಲ್ಲವೆ ? ನಾನು ನಿನಗೆ ಕೇಡು ಬಗೆಯುತ್ತಿಲ್ಲ' ಎಂದಾಗ, ಕರ್ಣನು "ಕೃಷ್ಣ, ಈ ಭೂಮಿಯ ರಾಜ್ಯಕ್ಕೆ ಮನಸೋಲುವವನಲ್ಲ, ಕೌರವರಿಂದ, ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಇಷ್ಟವಿಲ್ಲ. ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ತಲೆಗಳನ್ನು ಕಡಿದು ಒಪ್ಪಿಸುವ ಅವಸರದಲ್ಲಿದ್ದೆ. ಅದಕ್ಕೂ ಮೊದಲೇ ಕೌರವನನ್ನು ಕೊಂದು ಬಿಟ್ಟೆ. ಯಾರು ಏನು ಹೇಳಿದರೂ ಕೌರವನೇ ನನಗೆ ಎಲ. ನಾಳೆ ನಡೆಯುವ ಮಹಾಭಾರತ ಯುದ್ಧದಲ್ಲಿ ದುರ್ಯೋಧನನ ಋಣ ತೀರುವಂತೆ ಹೋರಾಡುತ್ತೇನೆ. ಅವನಿಗಾಗಿ ಶರೀರವನ್ನು ಅರ್ಪಿಸುತ್ತೇನೆ. ನಿನ್ನವರಾದ ಪಾಂಡವರನ್ನು ನೋಯಿಸುವುದಿಲ್ಲ ಎನ್ನುತ್ತಾನೆ. ಸಾಮಿನಿಷ್ಠೆಗೆ ಬದ್ಧನಾದ ಕರ್ಣ ಪ್ರಲೋಭನೆಗೆ ಬಲಿಯಾಗದೆ ಅಸಹಾಯಕನಾಗಿ, ಸಂಕಟದಿಂದ ಬಳಲುತ್ತಾನೆ. ಇಲ್ಲಿ ಕರ್ಣನ ಹಿರಿಮೆ–ಗರಿಮೆಗಳನ್ನು ಕಾಣಬಹುದಾಗಿದೆ. | |
| 30. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $2 \times 2 = 4$ |
| | ದೈನ್ಯದ ಬುಡದಲ್ಲಿ ಭಯವಿದೆ. ಭಯವೇ ನರನನ್ನು ದೀನನನ್ನಾಗಿ ಮಾಡುತ್ತದೆ. ಭಯವೆಂದರೆ ದಟ್ಟಡವಿಯಲ್ಲಿ ದಾರಿ ತಪ್ಪಿದ ಗೋವು, ಮುಚ್ಚಿದ ಕಣ್ಣುಗಳು, ಹಾರುತ್ತಿರುವ ಎದೆ, ಕತ್ತಲೆಯಲ್ಲಿ ಕಂಗೆಟ್ಟ ಶಿಶು, ಚಕ್ರವರ್ತಿಯ ಎದುರಿಗೆ ನ್ಯಾಯಸ್ಥಾನದಲ್ಲಿ ನಡುಗುತ್ತ ನಿಂತ ಅಪರಾಧಿ, ಬೇಟೆನಾಯಿ ಬೆನ್ನಟ್ಟಿದ ಮೊಲವೇ ಭಯ. ಭಯವು ಹುಟ್ಟುವುದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅಜ್ಞಾನದಿಂದ, ಪಾಪ ಶಂಕೆಯಿಂದ, ದೂಷಿತ ಹೃದಯದಿಂದ ಜ್ಞಾನ ಹೆಚ್ಚಿದಂತೆ ಭಯ ಕಡಿಮೆಯಾಗುವುದು. ಹಳ್ಳಿಗ ವಿಮಾನದಲ್ಲಿ ಕೂಡಲೂ ಅಂಜುತ್ತಾನೆ. ಆದರೆ ಕೆಲವು ತಿಂಗಳು ತರಬೇತಿ ಪಡೆದ ನಂತರ ಅವನೇ ವಿಮಾನವನ್ನು ನಡೆಸಬಹುದು. ಪ್ರತಿಯೊಬ್ಬನ ಮೇಲೆ ನಾವು ಹೊಣೆ ಹೊರಿಸಲು ಹೋಗುವುದು ತಪ್ಪಾದೀತು. ಆದರೆ ಆ ವ್ಯಕ್ತಿ ಇಲ್ಲವೇ ಸಂಸ್ಥೆಯ ಧೋರಣೆಯ ಹೊಣೆಯನ್ನೂ ನಾವು ಹೊತ್ತಿರಬಾರದು ಭೀಷ್ಮ, ದ್ರೋಣನಂತೆ ಒಡೆಯನಿಗೋಸ್ಕರ ದೇಹವನ್ನರ್ಪಿಸುವುದು ಕಾರ್ಯವೆಂದು ತಿಳಿದಿದ್ದರೂ ಆ ಕಾರ್ಯದ ಸಾಧು ಅಸಾಧುತೆಗಳ ಬಗ್ಗೆ ಅಭಿಪ್ರಾಯವು ಭೀಷ್ಮ ದ್ರೋಣರಲ್ಲಿಯಂತೆ ಸ್ಪಷ್ಟವಾಗಿರಬೇಕು. ಬಳ್ಳಿಯಂತೆ ಯಾರೂ ಕಾಲ್ತೊಡಕಾಗಬಾರದು. ನಾಯಿಯಂತೆ ಯಾವ ಬಾಗಿಲಲ್ಲಿಯೂ ಸುಳಿಯಬಾರದು. ಮೋಡದಂತೆ ಗುರಿಯಿಲ್ಲದೆ ಗಾಳಿಯ ತೊತ್ತಾಗಬಾರದು. ನಿಲ್ಲಬೇಕಾದಲ್ಲಿ ನಿಲ್ಲುವ, ಉರುಳಬೇಕಾದಲ್ಲಿ ಉರುಳುವ ಗೋಲವಾಗಬೇಕು ವ್ಯಕ್ತಿತ್ವ. ಈ ಕೇಂದ್ರದಲ್ಲಿಯೇ ವ್ಯಕ್ತಿ ಸಮಾಜಗಳ ಸಾಮರಸ್ಯದ ಬೀಜವಿದೆ.<br>*ಪ್ರಶ್ನೆಗಳು :*<br>ಅ) ಭಯವು ವ್ಯಕ್ತವಾಗುವ ಸಂದರ್ಭಗಳನ್ನು ತಿಳಿಸಿ.<br>ಆ) ಮಾನವನ ವ್ಯಕ್ತಿತ್ವ ಹೇಗಿರಬೇಕು ಎಂಬುದನ್ನು ಸ್ಪಷ್ಟಪಡಿಸಿ.<br>***ಉತರ :***<br>ಅ) ದೈನ್ಯದ ಬುಡದಲ್ಲಿ ಭಯವಿದೆ. ಭಯವೇ ನರನನ್ನು ದೀನನ್ನಾಗಿ ಮಾಡುತ್ತದೆ. ಭಯವೆಂದರೆ ದಟ್ಟಡವಿಯಲ್ಲಿ ದಾರಿ ತಪ್ಪಿದ ಗೋವು, ಮುಚ್ಚಿದ ಕಣ್ಣುಗಳು, ಹಾತುತ್ತಿರುವ ಎದೆ, ಕತ್ತಲೆಯಲ್ಲಿ ಕಂಗೆಟ್ಟ ಶಿಶು, ಚಕ್ರವರ್ತಿಯ ಎದುರಿಗೆ ನ್ಯಾಯಸ್ಥಾನದಲ್ಲಿ ನಡುಗುತ್ತ ನಿಂತ ಅಪರಾಧಿ, ಬೇಟೆ ನಾಯಿ ಬೆನ್ನಟ್ಟಿದ ಮೊಲವೇ ಭಯ. ಇವು ಭಯ ವ್ಯಕ್ತವಾಗುವ ವಿವಿಧ ಸಂದರ್ಭಗಳು.<br>ಆ) ಭೀಷ್ಮ ದ್ರೋಣನಂತೆ ಒಡೆಯನಿಗೋಸ್ಕರ ದೇಹವನ್ನರ್ಪಿಸುವುದು ಕಾರ್ಯವೆಂದು ತಿಳಿದಿದ್ದರೂ ಆ ಕಾರ್ಯದ ಸಾಧು ಆಸಾಧುತೆಗಳ ಬಗ್ಗೆ ಅಭಿಪ್ರಾಯವು ಭೀಷ್ಮ ದ್ರೋಣರಲ್ಲಿಯಂತೆ ಸ್ಪಷ್ಟವಾಗಿರಬೇಕು. ಬಳ್ಳಿಯಂತೆ ಯಾರೂ ಕಾಲ್ತೊಡಕಾಗಬಾರದು. ನಾಯಿಯಂತೆ ಯಾವ ಬಾಗಿಲಲ್ಲಿಯೂ ಸುಳಿದಿರಬಾರದು. ಮೋಡದಂತೆ ಗುರಿಯಿಲ್ಲದೆ ಗಾಳಿಯ ತೊತ್ತಾಗಬಾರದು. ನಿಲ್ಲಬೇಕಾದಲ್ಲಿ ನಿಲ್ಲುವ, ಉರುಳಬೇಕಾದಲ್ಲಿ ಉರುಳುವ ಗೋಲವಾಗಬೇಕು ವ್ಯಕ್ತಿತ್ವ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 31. | ಯಣ್ ಸಂಧಿಗೆ ಉದಾಹರಣೆಯಾದ ಪದವಿದು<br>***ಉತ್ತರ :*** (ಬಿ) ಅತ್ಯವಸರ | |
| 32. | 'ಕಣ್ದೆರೆ' ಪದವು ಈ ಸಮಾಸದ್ದಾಗಿದೆ<br>***ಉತ್ತರ :*** (ಎ) ಕ್ರಿಯಾ | |
| 33. | ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸುವ ಲೇಖನ ಚಿಹ್ನೆ<br>***ಉತ್ತರ :*** (ಸಿ) ಆವರಣ | |
| 34. | ತದ್ಧಿತಾಂತ ಭಾವನಾಮಕ್ಕೆ ಉದಾಹರಣೆಯಾದ ಪದ<br>***ಉತ್ತರ :*** (ಡಿ) ಜಾಣತನ | |
| 35. | 'ವ್ಯಾಪಾರಿ' ಪದವು ನಾಮಪದದ ಈ ಗುಂಪಿಗೆ ಸೇರಿದೆ<br>***ಉತ್ತರ :*** (ಡಿ) ಅನ್ವರ್ಥನಾಮ | |
| 36. | ನಿಷೇಧ ಕೃದಂತಕ್ಕೆ ಸೂಕ್ತ ಉದಾಹರಣೆ<br>***ಉತ್ತರ :*** (ಎ) ಬಾಳದ | |
| 37. | ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯವನ್ನು ಹೀಗೆನ್ನುವರು<br>***ಉತ್ತರ :*** (ಡಿ) ಸಾಮಾನ್ಯಾವ್ಯಯ | |
| 38. | ಸಂಬಂಧಕಾರಕವನ್ನು ತಿಳಿಸುವ ವಿಭಕ್ತಿ ಪ್ರತ್ಯಯ ಇದು<br>***ಉತ್ತರ :*** (ಸಿ) ಅ | |
| 39. | 'ಸಕರ್ಮಕ ಧಾತು'ವಿಗೆ ಉದಾಹರಣೆ ಇದು<br>***ಉತ್ತರ :*** (ಬಿ) ಕೊಡು | |
| 40. | ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಹೀಗೆಂದು ಕರೆಯುತ್ತಾರೆ<br>***ಉತ್ತರ :*** (ಎ) ಸಾಮಾನ್ಯ ವಾಕ್ಯ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 41. | ತುತ್ತತುದಿ : ದ್ವಿರುಕ್ತಿ :: ಹಾಲ್ಜೇನು : ........................ .<br>***ಉತ್ತರ :*** ಜೋಡುನುಡಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 42. | ಪನ್ನಗ : ಹಾವು :: ಆದಿತ್ಯ : ......................... .<br>***ಉತ್ತರ :*** ಸೂರ್ಯ | |
| 43. | ದಿಟ್ಟಿ : ದೃಷ್ಟಿ :: ತವಸಿ : ......................... .<br>***ಉತ್ತರ :*** ತಪಸ್ವಿ | |
| 44. | ಅರ್ಜಿ : ಹಿಂದೂಸ್ಥಾನಿ :: ರುಜು : ......................... .<br>***ಉತ್ತರ :*** ಉರ್ದು | |
| 45. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಲಲನೆ ಪಡೆದೀಯ್ಯೆದು ಮಂತ್ರಂ

ಗಳಲಿ ಮೊದಲಿಗ ನೀನು ನಿನ್ನಯ

ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ

***ಅಥವಾ***

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

***ಉತ್ತರ :***

| | | | | |
|---|---|---|---|---|
| ೩ | ೪ | ೩ | ೪ | |
| U U U | U U — | — U | — — | |
| ಲಲನೆ | ಪಡೆದೀ | ಯ್ಯೆದು | ಮಂತ್ರಂ | = ೧೪ |

| | | | | |
|---|---|---|---|---|
| ೩ | ೪ | ೩ | ೪ | |
| U U U | U U U U | — U | — U U | |
| ಗಳಲಿ | ಮೊದಲಿಗ | ನೀನು | ನಿನ್ನಯ | = ೧೪ |

| | | | | | | | |
|---|---|---|---|---|---|---|---|
| ೩ | ೪ | ೩ | ೪ | ೩ | ೪ | ೨ | |
| U U U | — U U | — U | — U U | — U | U U — | — | |
| ಬಳಿ ಯು | ಧಿಷ್ಠಿರ | ದೇವ | ಮೂರನೆ | ಯಾತ | ಕಲಿಭೀ | ಮ | = ೨೩ |

ಇದು ಮಾತ್ರಾಗಣ ಛಂದಸ್ಸಿನ ಭಾಮಿನಿಷಟ್ಪದಿಯ ಲಕ್ಷ್ಯವಾಗಿದೆ.

***ಅಥವಾ***

| | | | | | | |
|---|---|---|---|---|---|---|
| ನ | ಜ | ಭ | ಜ | ಜ | ಜ | ರ |
| U U U | U — U | — U U | U — U | U — U | U — U | — U — |
| ಕ ರು ಕು | ಳ ನಂ ದ | ನಂ ಪ ವ | ನ ನಂ ದ | ನ ನೆಂ ಬ | ಮ ದಾಂ ಧ | ಗಂ ಧ ಸಿಂ |

ಇದು ಅಕ್ಷರ ಗಣ ಛಂದಸ್ಸಿನ ಚಂಪಕಮಾಲಾವೃತ್ತದ ಲಕ್ಷ್ಯವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 46. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು."

***ಅಥವಾ***

"ಮಾರಿಗೌತಣವಾಯ್ತು ನಾಳಿನ ಭಾರತವು."

***ಉತ್ತರ :***

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ ಎನಿಸುತ್ತದೆ.

*ಸಮನ್ವಯ* : ಉಪಮೇಯ : ಭೀಮ ದುರ್ಯೋಧನರು

ಉಪಮಾನ : ಮದಗಜಗಳು

ಉಪಮಾ ವಾಚಕ : ಅಂತೆ

ಸಮಾನಧರ್ಮ : ಹೋರಾಟ

ಈ ಮೇಲಿನ ಲಕ್ಷ್ಯದಲ್ಲಿ ಉಪಮೇಯವಾದ ಭೀಮ ದುರ್ಯೋಧನರಿಗೂ ಉಪಮಾನವಾದ ಮದಗಜಗಳಿಗೆ ಉಪಮಾವಾಚಕವಾದ 'ಅಂತೆ' ಎಂಬುದರ ಮೂಲಕ ಸಮಾನಧರ್ಮವಾದ ಹೋರಾಟವನ್ನು ಹೇಳಿ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಪೂರ್ಣ ಉಪಮಾಲಂಕಾರದ ಉದಾಹರಣೆಯಾಗಿದೆ.

***ಅಥವಾ***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

*ಅಲಂಕಾರದ ಹೆಸರು* : ರೂಪಕಾಲಂಕಾರ

*ಲಕ್ಷಣ* : ಅತಿ ಸಾಮ್ಯತೆಯಿಂದಾಗಿ ಉಪಮೇಯ ಉಪಮಾನಗಳಲ್ಲಿ 'ಅಭೇದ'ವನ್ನು ಹೇಳಿ ವರ್ಣಿಸಿದಾಗ ಅದು ರೂಪಕಾಲಂಕಾರ ಎನಿಸುತ್ತದೆ.

*ಸಮನ್ವಯ :*

*ಉಪಮೇಯ* : ನಾಳಿನ ಭಾರತ (ಯುದ್ಧ)

*ಉಪಮಾನ* : ಮಾರಿಗೆ ಔತಣ

ಈ ಮೇಲಿನ ಲಕ್ಷ್ಯದಲ್ಲಿ ನಾಳಿನ ಭಾರತ (ಯುದ್ಧ) ಎಂಬ ಉಪಮೇಯಕ್ಕೂ ಮಾರಿಗೆ ಔತಣ ಎಂಬ ಉಪಮಾನಕ್ಕೂ ಪರಸ್ಪರ 'ಅಭೇದ' ಕಲ್ಪಿಸಿ ಒಂದೇ ಎಂದು ವರ್ಣಿಸಿರುವುದರಿಂದ ಇದು ರೂಪಕಾಲಂಕಾರಕ್ಕೆ ಲಕ್ಷ್ಯವಾಗಿದೆ.

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

47. **ಗಾದೆಯನ್ನು ವಿಸ್ತರಿಸಿ ಬರೆಯುವುದು :** $1 \times 3 = 3$

* ದೇಶ ಸುತ್ತಿ ನೋಡು; ಕೋಶ ಓದಿ ತಿಳಿ

* ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ

* ಅತಿ ಆಸೆ ಗತಿ ಕೇಡು

***ಉತ್ತರ :***

| | |
|---|---|
| ಗಾದೆಯ ಮಹತ್ವದ ವಿವರಣೆ | 1 ಅಂಕ |
| ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ನಿಮ್ಮನ್ನು ಬೈಲಹೊಂಗಲದ ಗ್ರಾಮೀಣ ವಿದ್ಯಾಸಂಸ್ಥೆಯ 'ಸಮರ್ಥ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ 'ಅಂತರ ಶಾಲಾ ಚರ್ಚಾ ಸ್ಪರ್ಧೆಯ ಪ್ರಶಸ್ತಿ ಪ್ರದಾನ' ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಕನ್ನಡ ಪ್ರಭ' ದಿನಪತ್ರಿಕೆಯ ಸಂಪಾದಕರಿಗೊಂದು ಮನವಿ ಪತ್ರ ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ 'ಪ್ರಮತ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲಿ ನಡೆಯಲಿರುವ 'ವಿಜ್ಞಾನ ವಸ್ತುಪ್ರದರ್ಶನದ ವೀಕ್ಷಣೆ'ಗೆ ಆಗಮಿಸುವಂತೆ ಆಹ್ವಾನಿಸಿ ಯಲ್ಲಾಪುರದ ರಥಬೀದಿಯಲ್ಲಿ ವಾಸವಾಗಿರುವ 'ಸುವರ್ಣ' ಎಂಬ ಹೆಸರಿನ ಸಹೋದರಿಗೆ ಪತ್ರ ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ಸಹೋದರಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು / ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 49. | **ಪ್ರಬಂಧ ಬರೆವಣಿಗೆ :** | |
| | * ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು | |
| | * ಸ್ವಚ್ಛತಾ ಅಭಿಯಾನದಲ್ಲಿ ಯುವಕರ ಪಾತ್ರ | |
| | * ಸಾವಯವ ಕೃಷಿ | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |